# ಇಸ್ರೇಲ್ ರಾಷ್ಟ್ರದ ಅಧ್ಯಕ್ಷರೊಂದಿಗೆ ಪ್ರಧಾನ ಮಂತ್ರಿಯವರ ಭೇಟಿ

ಡಿಸೆಂಬರ್ 01, 2023

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು 1 ಡಿಸೆಂಬರ್ 2023 ರಂದು ದುಬೈನಲ್ಲಿ COP 28 ಶೃಂಗಸಭೆಯ ಸಂದರ್ಭದಲ್ಲಿ ಇಸ್ರೇಲ್ ರಾಜ್ಯದ ಅಧ್ಯಕ್ಷರಾದ ಹೆಚ್.ಈ ಶ್ರೀ ಐಸಾಕ್ ಹೆರ್ಜೋಗ್ ಅವರೊಂದಿಗೆ ದ್ವಿಪಕ್ಷೀಯ ಸಭೆಯನ್ನು ನಡೆಸಿದರು.

ಪಿ ಪ್ರದೇಶದಲ್ಲಿ ಪ್ರಸ್ತುತ ನಡೆಯುತ್ತಿರುವ ಇಸ್ರೇಲ್ -ಹಮಾಸ್ ಘರ್ಷಣೆಯ ಬಗ್ಗೆ ಇಬ್ಬರು ನಾಯಕರು ಅವ್ರ ಅಭಿಪ್ರಾಯವನ್ನು ವಿನಿಯಮ ಮಾಡಿಕೊಂಡರು. ಅಕ್ಟೋಬರ್ ಏಳರಂದು ನಡೆದ ಭಯೋತ್ಪಾದಕ ಘಟನೆಯ ಪರಿಣಾಮ ಉಂಟಾದ ಪ್ರಾಣಹಾನಿಯ ಮೇಲೆ ಪ್ರಧಾನ ಮಂತ್ರಿಯವರು ಸಂತಾಪ ವ್ಯಕ್ತ ಪಡಿಸಿದರು ಮತ್ತು ಬಂಧಿತರ ಬಿಡುಗಡೆಯನ್ನು ಶ್ಲಾಘಿಸಿದರು.

ಪರಿಣಾಮ ಬೀರಿದ ಜನಸಂಖ್ಯೆಗೆ ಮಾನವೀಯ ನೆರವಿನ ನಿರಂತರ ಮತ್ತು ಸುರಕ್ಷಿತ ವಿತರಣೆಯ ಅಗತ್ಯತೆಯನ್ನು ಪ್ರಧಾನಮಂತ್ರಿ ಪುನರುಚ್ಚರಿಸಿದರು. ಮಾತುಕತೆ ಮತ್ತು ರಾಜತಾಂತ್ರಿಕತೆಯ ಮೂಲಕ ಇಸ್ರೇಲ್ ಪ್ಯಾಲೆಸ್ತೀನ್ ತೊಂದರೆಯ ಆರಂಭಿಕ ಮತ್ತು ದೀರ್ಘಕಾಲೀನ ಪರಿಹಾರ ಮತ್ತು ಎರಡು ರಾಜ್ಯ ಎಂಬ ಪರಿಹಾರಕ್ಕೆ ಭಾರತದ ಬೆಂಬಲದ ಮೇಲೆ ಅವರು ಮಾತನಾಡಿದರು.

ಭಾರತದ G20 ಅಧ್ಯಕ್ಷತೆಯ ವಿಷಯದಲ್ಲಿ ಅಧ್ಯಕ್ಷ ಹೆರ್ಜೋಗ್ ಅವರು ಪ್ರಧಾನ ಮಂತ್ರಿಯವರಿಗೆ ಅಭಿನಂದಿಸಿದರು ಮತ್ತು ಭಾರತ-ಮಧ್ಯಪ್ರಾಚ್ಯ-ಯುರೋಪ್ ಆರ್ಥಿಕ ಕಾರಿಡಾರ್ ಉದ್ಘಾಟನೆಯನ್ನು ಸ್ವಾಗತಿಸಿದರು.

**ದುಬೈ**
**ಡಿಸೆಂಬರ್ 01, 2023**